ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ: 1234, 5ನೇ ಮಹಡಿ, ಕೆ.ಎಸ್.ಎಸ್.ಐ.ಡಿ.ಸಿ, ಐಟಿ ಪಾರ್ಕ್, ಸೌತ್ ಬ್ಲಾಕ್
ರಾಜಾಜಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-560010
ದೂ. 080-22372738 e-mail: karnregs@gmail.com

ಆರ್.ಡಿ.ಸಿ-ಇ.ಜಿ.ಎಸ್/ 689/2022 (E-869300) ದಿನಾಂಕ: 01.10.2022

**ಇವರಿಗೆ**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2022-23ನೇ ಸಾಲಿಗೆ NRLM ಸ್ವ-ಸಹಾಯಕ ಗುಂಪುಗಳಿಗೆ ಆರ್ಥಿಕವಾಗಿ ಬಲ ನೀಡಲು ಸಮುದಾಯ ಆಧಾರಿತ ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಿಸಲು ಮಾದರಿ ಅಂದಾಜು ಪತ್ರಿಕೆಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:** ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ದಿನಾಂಕ: 21.09.2022ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ.

~~~~~~

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾರ್ಯಕ್ರಮಗಳನ್ನು ಸರ್ಕಾರದ ಇತರೇ ಇಲಾಖೆ/ಸಂಸ್ಥೆಗಳೊಂದಿಗೆ ಒಗ್ಗೂಡಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನತೆಗೆ ಅಕುಶಲ ಉದ್ಯೋಗದ ಜೊತೆಗೆ, ಬಹು ಉಪಯೋಗಿ ಶಾಶ್ವತವಾದ ಬಳಕೆಯ ಆಸ್ತಿಯನ್ನು ಸೃಜಿಸುವ ಉದ್ದೇಶ ಹೊಂದಲಾಗಿದೆ. ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಅಡಿ ಮಹಿಳಾ ಸ್ವ-ಸಹಾಯ ಗುಂಪು/ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಮೂಲಕ ಅನುಷ್ಠಾನಗೊಳಿಸುತ್ತಿರುವ ಸಮುದಾಯ ಬಂಡವಾಳ ನಿಧಿ, ಬ್ಯಾಂಕಿನ ಸಾಲ ಹಾಗೂ ಸರ್ಕಾರದ ಇತರೆ ಯೋಜನೆಗಳಿಂದ ಹಣಕಾಸು ನೆರವು ಪಡೆದು, ಹೈನುಗಾರಿಕೆ, ಕೃಷಿ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಯಂತಹ ಆದಾಯೋತ್ಪನ್ನ ಚಟುವಟಿಕೆಗಳನ್ನು ಗುಂಪಾಗಿ ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಪಂಚಾಯತಿ ವ್ಯಾಪ್ತಿಯಲ್ಲಿ ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಾಣವನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ಅನುಷ್ಠಾನಿಸಬೇಕಾಗಿದೆ.

ಕೇಂದ್ರ ಸರ್ಕಾರವು ದಿನಾಂಕ: 01-04-2022ರಿಂದ ಜಾರಿಗೆ ಬರುವಂತೆ ಕೂಲಿ ದರವನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದೆ. ಇದರ ಪ್ರಕಾರ ರಾಜ್ಯಕ್ಕೆ ರೂ. 309/- ಪ್ರತಿ ದಿನಕ್ಕೆ ಅಕುಶಲ ಕೆಲಸಕ್ಕೆ ಅಳತೆಗನುಗುಣವಾಗಿ ದರ ನಿಗದಿಪಡಿಸಿದ್ದಾರೆ.

ಇದರನ್ವಯ ಮೇಲಿನ ಕೆಲಸಕ್ಕೆ ಮಾದರಿ ಅಂದಾಜು ಪತ್ರಿಕೆಯನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ತಯಾರಿಸಿದೆ. ಈ ಯೋಜನೆ ಅಧಿಸೂಚನೆ-1 (ದಿನಾಂಕ: 03-04-2014ರಂದು ಭಾರತ ರಾಜ್ಯ ಪತ್ರದಲ್ಲಿನ ಪ್ರಕಟಿತ) ಪ್ರವರ್ಗ-C II ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಪರಿಷ್ಕೃತ ದರಗಳನ್ವಯ NRLM ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಿಸಲು ಮಾದರಿ ಅಂದಾಜು ಪತ್ರಿಕೆಯನ್ನು ಅನುಮೋದಿಸಿ ಈ ಪತ್ರದೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ. ವಿವರ ಕೆಳಕಂಡಂತಿದೆ.

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ಕೂಲಿ : ಸಾಮಗ್ರಿ ಅನುಪಾತ | ಷರಾ |
|---|---|---|---|---|
| 1 | ಕೋಳಿ ಶೆಡ್ (100 ಸಂಖ್ಯೆ) | 1,80,000/- | 11.3:88.7 | ಸಮುದಾಯ ಆಧಾರಿತ ಕಾಮಗಾರಿ |
| 2 | ಕುರಿ/ಆಡು ಶೆಡ್ (25 ಸಂಖ್ಯೆ) | 2,90,000/- | 11.4:88.6 | |
| 3 | ಹಂದಿ ಶೆಡ್ (60 ಸಂಖ್ಯೆ) | 9,50,000/- | 12.7:87.3 | |
~~~~~~

ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಂಜೀವಿನಿ ಸಂಸ್ಥೆಯಿಂದ ರಚಿಸಿರುವ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ನೆರವು ನೀಡಲು ನರೇಗಾ ಯೋಜನೆಯಡಿ NRLM ಸ್ವ-ಸಹಾಯಕ ಗುಂಪುಗಳಿಗೆ ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಾಣ ಮಾಡಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

**ಷರತ್ತುಗಳು:**

1. ಕಾಮಗಾರಿ ಆಯ್ಕೆ, ಅನುಷ್ಠಾನ ನಿರ್ವಹಣೆ, Schedule 1 & 2 ಹಾಗೂ ಕಾರ್ಯಾಚರಣೆ ಮಾರ್ಗಸೂಚಿ 2013ರ 4ನೇ ಆವೃತ್ತಿಯ ನಿರ್ದೇಶನಗಳಿಗೆ ಒಳಪಟ್ಟಿವೆ.
2. ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳಲು ಅಗತ್ಯವಾದ ಟೆಸ್ಟ್‌ಗಳನ್ನು ಸಹ ಮಾಡಬಹುದು. ಅಗತ್ಯವಿದ್ದಲ್ಲಿ ಇಂಜಿನಿಯರಿಂಗ್ ಪಾಲಿಟೆಕ್ನಿಕ್/ಕಾಲೇಜುಗಳ ಸಹಾಯ ಪಡೆಯಬಹುದು. ರಾಜ್ಯ/ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ರವರು ಭೇಟಿಗೆ ಬಂದಾಗ ಅವರ ಸಲಹೆ ಪಡೆಯಬಹುದು.
3. ಸದರಿ ಕಾಮಗಾರಿಗೆ ಆಗುವ ವೆಚ್ಚವನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುದಾನದಿಂದ ಭರಿಸತಕ್ಕದ್ದು.
4. ಅಂದಾಜು ಪಟ್ಟಿಯಂತೆ ಕಾಮಗಾರಿ ಪೂರ್ಣವಾದ ನಂತರ ಗ್ರಾಮ ಪಂಚಾಯತಿಯ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸೃಜಿಸಲಾದ ಆಸ್ತಿಯಾಗುತ್ತದೆ. ಅವುಗಳ ನಿರ್ವಹಣೆ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ವಿಷಯವಾಗಿರುತ್ತದೆ.
5. ಈ ಅಂದಾಜು ನರೇಗಾ/ಲೋಕೋಪಯೋಗಿ ಇಲಾಖೆಗಳ ದರಪಟ್ಟಿಯ ಪ್ರಕಾರ ತಯಾರಿಸಲಾಗಿದ್ದು, ಆಯಾ ಪ್ರದೇಶಗಳಿಗೆ ಅನ್ವಯವಾಗುವ ಚಾಲ್ತಿ ಸಾಲಿನ ದರಪಟ್ಟಿಯನ್ನು ವಾಸ್ತವಿಕ ಪರಿಸ್ಥಿತಿ ಪ್ರಕಾರ ತಳಪಾಯ ವಿನ್ಯಾಸಿಸಿಕೊಂಡು ತಯಾರಿಸತಕ್ಕದ್ದು ಮತ್ತು ಮಂಜೂರಾತಿ ನಂತರವೇ ಕಾಮಗಾರಿ ಅನುಷ್ಠಾನಿಸತಕ್ಕದ್ದು.
6. ನರೇಗಾ ಕಾಮಗಾರಿಗಳು ಸಾಮಾಜಿಕ ಪರಿಶೋಧನೆ ಹಾಗೂ ಓಂಬುಡ್ಸಮನ್ ಪರಿಶೀಲನೆಗೆ ಒಳಪಡುತ್ತದೆ.
7. This is only a model estimate, the officer/engineer-in-charge should visit the site and prepare the estimate based on (i) Actual site conditions (ii) Foundation to be designed as per existing geological conditions.
8. KTPP ನಿಯಮದಂತೆ ಸಾಮಗ್ರಿಗಳನ್ನು ಖರೀದಿಸಲು ಕ್ರಮವಹಿಸತಕ್ಕದ್ದು.
9. ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಾಣ ಕಾಮಗಾರಿಗಳನ್ನು ನೊಂದಾಯಿತ ಜಾಬ್‌ಕಾರ್ಡ್ ಹೊಂದಿರುವ ಕೂಲಿಕಾರರಿಂದ ಮಾತ್ರ ನಿರ್ವಹಿಸತಕ್ಕದ್ದು ಮತ್ತು ಯೋಜನೆಯಡಿ ಅನುಮತಿಸಲ್ಪಟ್ಟ ಯಂತ್ರಗಳನ್ನು ಹೊರತುಪಡಿಸಿ ಇತರೆ ಯಾವುದೇ ಯಂತ್ರಗಳನ್ನು ಬಳಸತಕ್ಕದ್ದಲ್ಲ.
10. ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಾಣ ಕಾಮಗಾರಿಗಳು ಕಡ್ಡಾಯವಾಗಿ ಗ್ರಾಮ ಸಭೆಯಲ್ಲಿ ಅನುಮೋದನೆಯಾಗಿರಬೇಕು ಹಾಗೂ ಸಾಮಗ್ರಿ ಮತ್ತು ಕೂಲಿ ಅನುಪಾತವು 40 : 60 ನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.
11. ಕುರಿ/ಆಡು/ಕೋಳಿ/ಹಂದಿ ಶೆಡ್ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಯೋಜನೆಯ ಇತರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
12. ನಿರ್ಮಾಣ ವೆಚ್ಚವು ಅಧಿಕವಾದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಇತರೆ ಅನುದಾನವನ್ನು ಬಳಸಿ ನಿರ್ಮಿಸಲು ತಿಳಿಸಿದೆ.

**ತಮ್ಮ ವಿಶ್ವಾಸಿ**

11/10/22

**ಆಯುಕ್ತರು ಗ್ರಾಮೀಣಾಭಿವೃದ್ಧಿ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಬೆಂಗಳೂರು.
5. ಆಯುಕ್ತರು, ಪಂಚಾಯತ್ ರಾಜ್, ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು.
6. ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ, ಶೇಷಾದ್ರಿಪುರಂ, ಬೆಂಗಳೂರು.
7. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಆಪ್ತ ಶಾಖೆಗೆ
8. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
9. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
10. ಜಂಟಿ ನಿರ್ದೇಶಕರು (ಆಡಳಿತ/ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
11. ಸಹಾಯಕ ನಿರ್ದೇಶಕರು (ಆಡಳಿತ, 1, 2 ಮತ್ತು 3), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
12. ರಾಜ್ಯ ಯೋಜನಾ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
13. ಹೆಚ್ಚಿನ ಪ್ರತಿಗಳು.